

## ಸೂಪರ್ ಕಾಪ್ ಅಜಯ್ ರಾವ್

ಲವರ್ ಬಾಯ್ ಇಮೇಜನ್ನು 'ತಾಯಿಗೆ ತಕ್ಕ ಮಗ' ಸಿನಿಮಾದಲ್ಲಿಯೇ ಕಳಚಿಟ್ಟು ಖಡಕ್ ಲುಕ್ ತೊಟ್ಟಿದ್ದ ಅಜಯ್ ರಾವ್, ಇದೀಗ ಸೂಪರ್ ಕಾಪ್ ಟೋಪಿ ತೊಟ್ಟಿದ್ದಾರೆ. ಕ್ರಿಮಿನಲ್ ಜಗತ್ತಿನೊಳಗೆ ಸಿಡಲಿನಂತೆ ನುಗ್ಗುವ ಖಡಕ್ ಅಧಿಕಾರಿಯಾಗಿ ಕಾಣಿಸಿಕೊಳ್ಳುತ್ತಿರುವ ಚಿತ್ರದ ಹೆಸರು 'ರೈನ್ ಬೋ'. ಇದೇನು ರೊಮ್ಯಾಂಟಿಕ್ ಪ್ರೇಮಕಥೆಯ ಹೆಸರು ಹೇಳಿದಂತಾಗುತ್ತದೆಯಲ್ಲ... ಎಂದು ಹುಬ್ಬೇರಿಸಬೇಡಿ. ಇದಕ್ಕೆ 'ಕಲರ್ಸ್ ಆಫ್ ಕ್ರೈಮ್' ಎನ್ನುವ ಅಡಿಟಿಪ್ಪಣಿಯೂ ಇದೆ.

ಈ ಪೊಲೀಸ್, ಮಚ್ಚು ಹಿಡಿದುಕೊಂಡು ಬೀದಿಯಲ್ಲಿ ದರೋಡೆ ಮಾಡುವವರನ್ನು ಹೆಡೆಮುರಿ ಕಟ್ಟುವವನಲ್ಲ. ಮಾಡರ್ನ್ ಟೆಕ್ನಾಲಜಿ ಬಳಸಿಕೊಂಡು ಅಪರಾಧ ಎಸಗುವ 'ಸ್ಮಾರ್ಟ್' ಕಳ್ಳರ ಸಂಚನ್ನು ಭೇದಿಸುವ ಚಾಣಾಕ್ಷ. ಮಾನ್ವಿತಾ ಕಾಮತ್ ಈ ಸಿನಿಮಾದಲ್ಲಿ ನಾಯಕಿಯಾಗಿ ನಟಿಸುತ್ತಿದ್ದಾರೆ. ಗುರು ದೇಶಪಾಂಡೆ ಅವರ ಗರಡಿಯಲ್ಲಿ ಪಳಗಿದ ರಾಜವರ್ಧನ್ ಎಂಬ ಹೊಸ ಹುಡುಗ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾನೆ. ಚಿತ್ರದ ನಿರ್ಮಾಣದ ಹೊಣೆಯೊಟ್ಟಿಗೆ 'ಕ್ರಿಯೇಟಿವ್ ಹೆಡ್' ಎಂಬ ಹುದ್ದೆಯನ್ನೂ ಗುರು ದೇಶಪಾಂಡೆ ಅವರೇ ಹೊತ್ತುಕೊಂಡಿದ್ದಾರೆ.

ಚಿತ್ರ: ಕೆ.ಎನ್. ನಾಗೇಶ್‌ಕುಮಾರ್

# ಅಂದವಾದ ಹುಡುಗಿ ಅನುಷಾ!

ಪಡ್ಡೆಗಳ ಎದೆಯೊಳಗೆ ಚುಟುಚುಟು ಎಬ್ಬಿಸಿದ ಆಶಿಕಾ ರಂಗನಾಥ್ ಚಂದನವನದ ಬೇಡಿಕೆಯ ನಟಿಯರಲ್ಲೊಬ್ಬರು. ಆದರೆ ಇವರ ಅಕ್ಕ ಅನುಷಾ ರಂಗನಾಥ್ ಅವರನ್ನು ಯಾಕೋ ಸ್ಯಾಂಡಲ್‌ವುಡ್ ಆದರದಿಂದ ಒಪ್ಪಿಕೊಳ್ಳಲಿಲ್ಲ. 'ದಿ ಗ್ರೇಟ್ ಸ್ಟೋರಿ ಆಫ್ ಸೋಡಾಬುಡ್ಡಿ', 'ಕೌರವ', 'ಲೈಫ್ 360' ಸಿನಿಮಾಗಳಲ್ಲಿ ನಟಿಸಿದರೂ ಹಿಟ್ ಒಲಿದುಬರಲಿಲ್ಲ. ಆನಂತರ ಅವರು ಕೆಲ ಕಾಲ ಚಿತ್ರರಂಗದಿಂದ ದೂರವೇ ಇದ್ದರು. ಇದೀಗ ಅನುಷಾ 'ಅಂದವಾದ' ಎಂಬ ಹೆಸರಿನ ಸಿನಿಮಾದ ಮೂಲಕ ಮತ್ತೆ ಬಂದಿದ್ದಾರೆ. ಈ ಚಿತ್ರ ತಮ್ಮ ವೃತ್ತಿಬದುಕಿಗೆ ಅಂದವಾದ ಫ್ರೇಮ್ ತೊಡಿಸುತ್ತದೆ ಎಂಬ ವಿಶ್ವಾಸ ಅವರಿಗಿದೆ.

ಅಂದಹಾಗೆ 'ಅಂದವಾದ', ಹೊಸ ಹುಡುಗರೇ ಸೇರಿಕೊಂಡು ರೂಪಿಸಿರುವ ಸಿನಿಮಾ. ಚಲ ಆ್ಯಕ್ಷನ್ ಕಟ್ ಹೇಳಿರುವ ಈ ಚಿತ್ರ ಮಧುರವಾದ ಪ್ರೇಮಕಥೆಯನ್ನು ಹೊಂದಿದೆಯಂತೆ. ಅನುರಾಗದ ಆಲಾಪಕೆ ಹೊಂದುವ ಹಾಗೆಯೇ ಮಾನ್ಸೂನ್ ಮೂಡ್ ಕಟ್ಟಿಕೊಡುವ ಹಾಗೆ ಮನೋಹರ ಸ್ಥಳಗಳಲ್ಲಿ ಹಾಡುಗಳನ್ನು ಚಿತ್ರೀಕರಣ ಮಾಡಲಾಗಿದೆ. ಗುರುಕಿರಣ್ ಸಂಗೀತ ಸಂಯೋಜಿಸಿದ್ದಾರೆ.

ಅಂಡಮಾನ್, ಚಿಕ್ಕಮಗಳೂರು, ಸಕಲೇಶಪುರದ ಚಂದದ ತಾಣಗಳಲ್ಲಿ ಸಿನಿಮಾ ಸೆರೆಹಿಡಿಯಲಾಗಿದೆ. ಈ ಸಿನಿಮಾದಲ್ಲಿ ಜೈ ಎನ್ನುವ ಹುಡುಗ ಅನುಷಾ ಜೊತೆಗೆ ತೆರೆ ಹಂಚಿಕೊಂಡಿದ್ದಾನೆ.

ಒಲವಿಗೆ ಮಿಡಿಯುವ ಮುಗ್ಧ ಹುಡುಗಿಯಾಗಿ ಕಾಣಿಸಿಕೊಂಡಿರುವ ಅನುಷಾ, ತಮ್ಮ ಈ ಪಾತ್ರ ಜನರಿಗೆ ಮೆಚ್ಚುಗೆ ಆಗುವುದರ ಜೊತೆಗೆ ಮತ್ತಷ್ಟು ಅವಕಾಶಗಳ ಗೊಂಚಲನ್ನು ಕೈಗೆಟುಕಿಸುತ್ತದೆ ಎಂಬ ಆಸೆಯಲ್ಲಿದ್ದಾರೆ.

